ದಿನಾಂಕ 13-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪ್ರಾಥಮಿಕ ವಿವಾದಾಂಶದ ಮೇಲೆ ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀಆರ್.ಎಸ್.ಟಿ ವಕೀಲರಿಂದಃ</u>**

6. ನಾನು ಮನೆಯನ್ನು ಕಟ್ಟಿಕೊಂಡಿರುವ ಆಸ್ತಿಯ ಪೂರ್ವ ದಿಕ್ಕಿಗೆ ಬಸವರಾಜ ಕೊಂಚಿಗೇರಿ ರವರ ಜಾಗ ಇದೆ ಎಂದರೆ ಸರಿ. ಪೂರ್ವ ದಿಕ್ಕಿಗೂ ನಮ್ಮದೇ ಆಸ್ತಿ ಇರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೂ ನನ್ನದೇ ಆಸ್ತಿ ಇದೆ. ಸಾಕ್ಷಿ ಮುಂದುವರೆದು ನಮ್ಮ ಆಸ್ತಿಯಿಂದ ಸ್ವಲ್ಪ ದೂರದಲ್ಲಿ ಮಸೀದಿ ಇದೆ ಎಂದು ನುಡಿಯುತ್ತಾರೆ. ಸದರಿ ಮಸೀದಿಗೆ ಮುಸ್ಲಿಂ ಬಾಂಧವರು ನಮಾಜ್ ಮಾಡಲು ಬರುತ್ತಾರೆ ಎಂದರೆ ಸರಿ. ಸದರಿ ಮಸೀದಿಯು ವಕ್ಫ ಬೋರ್ಡ ಆಧೀನದಲ್ಲಿದೆ ಎಂದರೆ ಗೊತ್ತಿಲ್ಲ. ಮಸೀದಿ ಜಾಗವು ವಕ್ಫ ಬೋರ್ಡ ಅಧೀನದಲ್ಲಿ ಮತ್ತು ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಮಸೀದಿ ಮತ್ತು ಮಸೀದಿ ಜಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಮನೆ ಮತ್ತು ಬಾಜುಕೆ ಇರುವ ನನಗೆ ಸಂಬಂಧಪಟ್ಟ ಖಾಲಿ ಜಾಗದ ಬಗ್ಗೆ ಮಾತ್ರ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

7. ನನ್ನ ಮನೆಯ ದಕ್ಷಿಣ ದಿಕ್ಕಿಗೆ ಇರುವ ಖುಲ್ಲಾ ಜಾಗವು ಮಸೀದಿಗೆ ಸಂಬಂಧಿಸಿದ ಜಾಗ ಎಂದರೆ ಸರಿಯಲ್ಲ. ಜುಮ್ಮಾ ಮಸೀದಿಗೆ ಸೇರಿ ಖುಲ್ಲಾ ಜಾಗಗಳ ದಾಖಲೆಗಳನ್ನು ನೋಡಿರುವುದಿಲ್ಲ. ಮಸೀದಿಗೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ನನಗೆ ಸಂಬಂಧಿಸಿದ ಆಸ್ತಿಗಳ ದಾಖಲೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಮಸೀದಿ ಮತ್ತು

ಮಸೀದಿ ಜಾಗಕ್ಕೆ ಸಂಬಂಧಿಸಿದಂತೆ ವಕ್ಫ ಬೋರ್ಡ ಒಂದು ಸಮಿತಿಯನ್ನು ರಚಿಸಿರುತ್ತಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ.

8. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಹಳೇಯ ಇಟ್ಟಿಗೆಯ ಮನೆಯ ಪಕ್ಕದಲ್ಲಿ ನಿಂತಿರುವ ಇಬ್ಬರು ವ್ಯಕ್ತಿಗಳ ಜಾವು ಮಸೀದಿಯ ಜಾಗ ಎಂಬ ಸೂಚನೆಗೆ ಸಾಕ್ಷಿಯು ಅಲ್ಲ ಎಂದು ನಿರಾಕರಿಸಿರುತ್ತಾರೆ. ಸಾಕ್ಷಿಗೆ ಮತ್ತೊಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಎಡಭಾಗದ ಗೋಡೆಯ ಮನೆಯು ತನ್ನ ಹಳೇ ಮನೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಅದೇ ಛಾಯಾ ಚಿತ್ರದಲ್ಲಿ ಬಿಳಿಯ ಬಟ್ಟೆಯಲ್ಲಿ ಒಬ್ಬ ವ್ಯಕ್ತಿಯು ನಿಂತಿರುವ ಜಾಗವು ಸಹ ತನಗೆ ಸೇರಿದ್ದು ಎಂದು ನುಡಿಯುತ್ತಾರೆ.

-8-

9 ಸಾಕ್ಷಿಗೆ ಮತ್ತೊಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಕಂಡು ಬರುವ ಬಲಭಾಗದ ಸಿಮೆಂಟ್ ಮೇಲ್ಚಾವಣೆಯ ಗುರುತಿನವರೆಗೂ ನಿನ್ನ ಮನೆ ಇದ್ದು, ಅದರ ಎಡಭಾಗದಲ್ಲಿ ಕಂಡು ಬರುವ ಹಂಚು ಮತ್ತು ಶೀಟವುಳ್ಳ ಮನೆ ಹಾಗೂ ಮುಂಭಾಗದ ಹಸಿರು ಗಿಡಗಳಿಂದ ಕೂಡಿದ ಖಾಲಿ ಜಾಗವು ಮಸೀದಿಗೆ ಸೇರಿದ ಖಾಲಿ ಜಾಗ ಎಂಬ ಸೂಚನೆಗೆ ಸಾಕ್ಷಿಯು ಸುಳ್ಳು ಎಂದು ನಿರಾಕರಿಸಿರುತ್ತಾರೆ. ವಿಪಿಸಿ ಆಸ್ತಿ ಸಂಃ 381 ಕರ್ನಾಟಕ ಸರಕಾರದ 1976 ರ ಅಧಿಸೂಚನೆಯಲ್ಲಿ ಆಡೂರು ಜುಮ್ಮಾ ಮಸೀದಿಗೆ ಸೇರಿದ ಜಾಗ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ಅಧಿಸೂಚನೆಯಲ್ಲಿ ಆಸ್ತಿ ಸಂಃ 381 ನ್ನು ಅಳತೆಗಳೊಂದಿಗೆ ಮಸೀದಿಗೆ ಸೇರಿದ ಜಾಗ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಮಸೀದಿಗೆ ಸೇರಿದ ಜಾಗವನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಕರ್ನಾಟಕ ವಕ್ಫ ಬೋರ್ಡಿಗೆ ಸೇರಿದ ಆಸ್ತಿ ಇದ್ದರೂ

ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.**

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ